## ಸವಣೂರು ನಗರದಲ್ಲಿ ಬಸ್‌ಡಿಪೋ ಸ್ಥಾಪನೆ

513 (823). ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸವಣೂರು ನಗರದಲ್ಲಿ ರೆವಿನ್ಯೂ ಸಬ್ ಡಿವಿಜನ್ ಕೇಂದ್ರವಿದ್ದು ಅಲ್ಲಿ ಬಸ್‌ಡಿಪೋವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆಯೇ?

ಆ) ಪಾಗಿದ್ದಲ್ಲಿ ಇನ್ನು ಎಷ್ಟು ಅವಧಿಯಲ್ಲಿ ಬಸ್‌ಡಿಪೋವನ್ನು ಅಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು.

ಆ) ಭೂಮಿಯನ್ನು ಪಡೆಯಲು ಪ್ರಯತ್ನಿಸಲಾಗಿದೆ. ಭೂಮಿ ಪಡೆದ ನಂತರ ಡಿಪೋ ಕಾರ್ಯ ಪ್ರಾರಂಭಿಸಲಾಗುವುದು.

## ಶಿಗ್ಗಾಂವ್ ನಗರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿ ಬಸ್ ಸ್ಟಾಂಡ್ ನಿರ್ಮಾಣ

514 (824). ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿಗ್ಗಾಂವ್ ನಗರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಸದರಿ ಬಸ್ ನಿಲ್ದಾಣದ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಗಮನದಲ್ಲಿದೆ.

ಆ) ಬಸ್ ನಿಲ್ದಾಣ ನಿರ್ಮಿಸಲು ನಿವೇಶನ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಭೂಸ್ವಾಧೀನವಾದ ನಂತರ ಬಸ್ ನಿಲ್ದಾಣದ ಕಾಮಗಾರಿಯನ್ನು ತಕ್ಷಣವೇ ಕೈಗೊಳ್ಳಲಾಗುವುದು.

## ರಾಜ್ಯದಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ

515 (721). ಶ್ರೀ ಬಿ. ಹೊಂಪಣ್ಣಗೌಡ (ಸಿಂಧನೂರು).- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆಯೆಷ್ಟು ಅವುಗಳನ್ನು ಯಾವ ಯಾವ ವರ್ಗಗಳವರಿಗೆ ನೀಡಲಾಗಿದೆ (ಜಿಲ್ಲಾ ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿರುವ ಪಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ರಾಜ್ಯದಲ್ಲಿ ಡಿಸೆಂಬರ್ 91ರ ಅಂತ್ಯಕ್ಕೆ ಒಟ್ಟು 31,14,608 ಹಸಿರು ಪಡಿತರ ಚೀಟಿದಾರರು ಇರುತ್ತಾರೆ. ಈ ಕೆಳಕಂಡ ವರ್ಗದವರಿಗೆ ಹಸಿರು ಪಡಿತರ ಚೀಟಿಗಳನ್ನು ನೀಡಿದೆ.